ದಿನಾಂಕಃ 31-05-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಃ ಎದುರುದಾರರ ಪರ ಶ್ರೀ ವಿ ಎ ಪಿ ವಕೀಲರಿಂದ

ಈ ಅರ್ಜಿಯನ್ನು ಸಲ್ಲಿಸುವ ವೇಳೆ ಎದುರುದಾರ ತಂದೆ ಮೃತಪಟ್ಟಿದ್ದರು ಎಂದರೆ ಸರಿಯಲ್ಲ. ಸಾಮಾನ್ಯವಾಗಿ ದೇವಸ್ಥಾನಗಳು ಬೆಳಿಗ್ಗೆ 6-00 ಗಂಟೆಗೆ ತೆರೆಯುತ್ತವೆ ಎಂದರೆ ಸರಿಯಲ್ಲ. ನಾನು 2020 ರಲ್ಲಿ ಬಳ್ಳಾರಿಯ ಆದರ್ಶ ಆಸ್ಪತ್ರೆಯಲ್ಲಿ ದಾಖಲಾಗಿದ್ದು, ಆದರೆ ಯಾವ ತಿಂಗಳು ಎಂದು ನನಗೆ ನೆನಪಿಲ್ಲ. ನನಗೆ ಮೂತ್ರದ ಅಲರ್ಜಿ, ವಾಂತಿಭೇದಿಯಾದ ಕಾರಣ ನಾನು

ದಾಖಲಾಗಿರುತ್ತೇನೆ. ನಾನು ಎದುರುದಾರ ಮತ್ತು ಆತನ ಮನೆಯವರ ವಿರುದ್ಧ ಸಿಸಿ ನಂ.715/2021 ನ್ನು ದಾಖಲಿಸಿರುತ್ತೇನೆ ಎಂದರೆ ಸರಿ. ಸದರಿ ಪ್ರಕರಣ ದಾಖಲಾದ ಬಳಿಕ ನಾನು ಎದುರುದಾರ ಮನೆಗೆ ಸಂಸಾರ ನಡೆಸಲು ಹೋಗಿರುವುದಿಲ್ಲ ಎಂದರೆ ಸರಿ. ನಾನು ಮಾನವಿಯಲ್ಲಿ ಎದುರುದಾರನ ಮನೆಯಲ್ಲಿ ವಾಸವಿದ್ದ ವೇಳೆ ಅಲ್ಲಿಯ ಸಿಡಿಪಿಓ ರವರಿಗೆ ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲ. ಸಿಂಧನೂರಿನಲ್ಲಿಯೂ ಸಹ ನಾನು ಅರ್ಜಿ ಸಲ್ಲಿಸಿರುವುದಿಲ್ಲ. ಆದರೆ ಸದರಿ ಇಲಾಖೆಯವರು ನನ್ನನ್ನು ವಿಚಾರಣೆಗೆ ಕರೆದಿರುತ್ತಾರೆ. ಆದರೆ ಯಾವ ವರ್ಷ, ಯಾವ ತಿಂಗಳು ಎಂದು ನನಗೆ ನೆನಪಿಲ್ಲ. ನಿಆರ್ -1 ಮತ್ತು 2 ರಲ್ಲಿ ಇರುವ ಮಹಿಳೆ ನಾನಾಗಿರುವುದಿಲ್ಲ. ನನ್ನ ತಂದೆಗೆ ಸರಿಯಾಗಿ ಕಣ್ಣು ಕಾಣಿಸದ ಕಾರಣ ಅವರು ಅದನ್ನು ಗುರುತಿಸಿರುತ್ತಾರೆ. ಎದುರುದಾರನ ಮನೆಯ ಅಕ್ಕಪಕ್ಕದ ನಿವಾಸಿಗಳ ಹೆಸರು ಹೇಳಲಾಗುವುದಿಲ್ಲ. ಸಾಕ್ಷಿ ಮುಂದುವರೆದು ನನ್ನನ್ನು ಗೃಹ ಬಂಧನದಲ್ಲಿ ಇಟ್ಟ ಕಾರಣ ಹೇಳಲಾಗುವುದಿಲ್ಲ ಎಂದು ನುಡಿದಿರುತ್ತಾರೆ.

ಎದುರುದಾರ ನನಗೆ ಯಾವುದೇ ರೀತಿ ಕಿರುಕುಳ ಕೊಟ್ಟಿಲ್ಲ ಹಾಗೂ ನಾನೇ ಸದರಿಯವರಿಗೆ ಕಿರುಕುಳ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರನ ತಾಯಿಗೆ ವಯಸ್ಸಾದ ಕಾರಣ ಅವರಿಗೆ ಸೇವೆ ಮಾಡಬೇಕಾಗುತ್ತದೆ ಎನ್ನುವ ಕಾರಣಕ್ಕೆ ಎದುರುದಾರನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನೇ ಎದುರುದಾರನ ತಂದೆಗೆ ಕಿರುಕುಳ ನೀಡಿದ್ದರಿಂದ ಸದರಿಯವರು ಮೃತಪಟ್ಟಿರುತ್ತಾರೆ ಎಂದರೆ, ಸಾಕ್ಷಿಯು ಅಪಘಾತದಲ್ಲಿ ಮೃತಪಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ಎದುರುದಾರ ನನಗೆ ಯಾವತ್ತಿಗೂ ಸಹ ಹೆಚ್ಚಿನ ವರದಕ್ಷಿಣೆ ಕೇಳಿಲ್ಲ ಎಂದರೆ ಸರಿಯಲ್ಲ. ಮದುವೆ ನಂತರ ನಾನು ಯಾವತ್ತಿಗೂ ಸಹ ಮಾನವಿಯ ಎದುರುದಾರನ ಮನೆಗೆ ಸಂಸಾರ ನಡೆಸಲು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ವಿಚ್ಛೇದನ ಆದ ನಂತರ ನಾನು ಮರುವಿವಾಹ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಮರುವಿವಾಹ ಆದರೂ ಸಹ ಎದುರುದಾರನಿಂದ ಜೀವನಾಂಶ ಪಡೆಯಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಜೆ.ಎಮ್.ಎಫ್.ಸಿ., ಸಿಂಧನೂರು.